ಕಥೆ

# ಘೃತಾಚಿ

ವನರಾಗ ಶರ್ಮಾ



ನಾನು ಹೇಳುವುದು ಇದೇನೇ. ಸೌಂದರ್ಯದ ಆರಾಧನೆ; ಜೀವನೋತ್ಸಾಹದ ತವರುಮನೆ. ತಪ್ಪದೆಯೆ – ಇದು ನನ್ನ ಆಲೋಚನೆ; ಚೆಲುವು ಜಗದ ಒಲವು. ನೋವು ಕಳೆವ ನಲಿವನ್ನು ತರುವ ಅಲೌಕಿಕ ಸೆಳವು. ಆನಂದದ ಮೂಲ ನೆಲೆಯೂ ಇದೇ ಎಂದು ದಾರ್ಶನಿಕರೂ ಹೇಳಿದ್ದಾರೆ. ರಸಿಕರೂ ತಲೆದೂಗಿದ್ದಾರೆ. ಎಲ್ಲರೂ ಆರಾಧಿಸುವುದು ಇದನ್ನೇ ಅಲ್ಲವೆ? ಹೌದು, ಹಾಗೆ ಆರಾಧಿಸಲಾಗುವ ಅಪೂರ್ವ ಚೆಲುವು ನನ್ನದು. ಚೆಲುವಿಕೆಗೆ ಮನಸೋಲದವರಾರು? ಒಲಿಯದವರಾರು? ನಿಲುವು ಬದಲಿಸಿಕೊಳ್ಳದವರಾರು? ನನ್ನೊಳಗೇ ನಾನು ಹೀಗೆ ಪ್ರಶ್ನೆ ಮಾಡಿಕೊಳ್ಳುತ್ತ ಆನಂದಿತಳಾಗುತ್ತೇನೆ. ಬಾಹ್ಯಪ್ರಪಂಚವನ್ನೇ ಮರೆತುಬಿಡುತ್ತೇನೆ. ಇದು ಅಹಂಕಾರವಲ್ಲ; ನನ್ನನ್ನೇ ನಾನು ಒಪ್ಪಿಕೊಳ್ಳುವ ಅಪ್ಪಿಕೊಳ್ಳುವ ತನ್ಮಯ ಭಾವ ಅಷ್ಟೆ.

ಗಂಧಮಾದನ ಪರ್ವತವಲಯ. ಇದು ಪ್ರಕೃತಿ ದೇವಿಯ ರಮಣೀಯ ಆಲಯ. ನವಿಲುಗಳು ಗರಿಗೆದರಿ ನರ್ತಿಸುತ್ತಿವೆ. ಕೋಗಿಲೆಗಳು ಇಂಪಾಗಿ ಹಾಡುತ್ತಿವೆ. ಹಂಸಗಳು ಸರೋವರದಲ್ಲಿ ಮೆಲ್ಲನೇ ತೇಲುತ್ತ ಸಾಗಿವೆ. ಮನಮೋಹಕ ಗಿರಿ–ಕಂದರ ತರುರಾಜಿಯ ವೈವಿಧ್ಯಮಯ ಅಚಲಾವಳಿ. ಸಾನುಪ್ರದೇಶದಲ್ಲಿ ಬೆಟ್ಟದಡಿಯ ಹುಲ್ಲಾಗಿ, ತಲೆದೂಗುತ್ತಿರುವ ಹಸಿರು ಹುಲ್ಲಿನ ವಿರಹಿಗಳ ವಿಪ್ರಲಂಭ ತಾಪ ಕಳೆಯಲು ಬರುತ್ತಿರುವುದೊ ಎಂಬಂತೆ ಮಂದ ಮಂದವಾಗಿ ಬೀಸುತ್ತಿರುವ ತಂಗಾಳಿ. ಅತ್ತೆತ್ತೆತ್ತಲು ಪ್ರಕೃತಿಯ ಸುಂದರ ದೃಶ್ಯಾವಳಿ. ಜಿಂಕೆಗಳು ಕಂಗಳ ಕಾಂತಿ ಬೀರಿ ಚಂಗನೆ ಜಿಗಿದು ಮಾಯವಾಗುತ್ತಿವೆ! ಅಪ್ಸರೆಯರಿಂದ ಅವು ಕಲಿತವೋ ನಾವು ಅಪ್ಸರೆಯರು ಅವುಗಳಿಂದ ಕಲಿತೆವೋ! ಇಲ್ಲಿಯೇ ನಾವು ದೇವಕನ್ನಿಕೆಯರು ಹೆಚ್ಚಾಗಿ ವಿಹಾರ ಮಾಡುವುದು. ಕಲೆತು ಕೆನೆಯುತ್ತ, ಹಾಡುತ್ತ ನಲಿಯುವುದು. ಮತ್ತೆ ಒಂಟಿಯಾಗಿ ನಿಸರ್ಗದಲ್ಲಿ ತಣಿಯುವುದು. ಇದು ನನಗೆ ಅತ್ಯಂತ ಪ್ರಿಯವಾದ ತಾಣ. ನನ್ನ ತಾರುಣ್ಯದ ಮೊಗ್ಗು ಪ್ರೇಮ ಪುಷ್ಪವಾಗಿ ಅರಳಿದ್ದೂ ಇಲ್ಲಿಯೇ.

ಪಾಚಿ ಕಟ್ಟಿಲ್ಲದ ಶುಭ್ರ ಸರೋವರವೆಂಬ ಕನ್ನಡಿಯಲ್ಲಿ ನನ್ನನ್ನೇ ನಾನು ನೋಡಿಕೊಳ್ಳುತ್ತ ಮದುವಣಗಿತ್ತಿಯಾಗುವ ಕನಸಿನಲ್ಲಿ ಮೈಮರೆವ ಷೋಡಶಿಯಂತೆ ಸಂಭ್ರಮಪಡುತ್ತ, ಇಲ್ಲಿ ಬಂದಾಗೆಲ್ಲ ದುಂಡುಮಲ್ಲಿಗೆಯ ದಂಡೆ ಮುಡಿದು, ದಂಡೆಯಲ್ಲಿ ಕುಳಿತಿರುತ್ತಿದ್ದ ನಾನು ಯಾರು ಗೊತ್ತೆ? ಹಾಂ, ಅವಳೇ ನಾನು, ಘೃತಾಚಿ!

ಸುರನರೋರಗಸರುವಲೋಗರಕಣ್ಮಣಿಯಾಗಿರುವ, ಕನಸು ಕಾಣುವವರ ಅರಸಿಯಾಗಿರುವ, ಅಪ್ಸರಸಿ ಘೃತಾಚಿ.

ನನಗೆ ಹೆಮ್ಮೆಯಿದೆ, ಪರಮ ಸಂತೋಷವಿದೆ. ಆದಾಗ್ಯೂ ಪರಮ ಸುಂದರಿಯಾದ ದೇವಲೋಕದ ಅಪ್ಸರೆಯಾಗಿಯೂ ಪಿಶಾಚಿಯಂತೆ ಅಲೆಯುತ್ತಿರಬೇಕಾಗಿದೆಯೆ? ಎಂಬ ಗ್ಲಾನಿಯೂ ನನ್ನನ್ನು ಒಮ್ಮೊಮ್ಮೆ ಕಾಡುತ್ತದೆ. ಹಾಗಂತ ನನ್ನದೊಬ್ಬಳದೇ ಕಥೆ–ವ್ಯಥೆ, ಇದಲ್ಲ. ಹಿಗ್ಗು–ಕುಗ್ಗು, ನೋವು–ನಲಿವು ನನಗೊಬ್ಬಳಿಗೇ ಬಂದುದೂ ಅಲ್ಲ. ತಂಗಿ ರಂಭೆ, ಗೆಳತಿಯರಾದ ತಿಲೋತ್ತಮೆ, ಊರ್ವಶಿ, ಮೇನಕೆ ಮೊದಲಾದವರದ್ದೂ ಇದೇ ಕತೆ. ಇನ್ನಿಲ್ಲದ